# ಅಗೋಚರ ಜನರು ಗೋಚರಿಸುವಂತಾದರು

**ಮಾರ್ಕ 14:3-9**

ನಾವಿಂದು ಅನೇಕ ದಿಕ್ಕುಗಳಿಗೆ ಸೆಳೆಯಲ್ಪಡುವ ಈ ಲೋಕದಲ್ಲಿ ಜೀವಿಸುತ್ತಿದ್ದೇವೆ. ನಾವು ಆಗಾಗ್ಗೆ ವಂಚಿತರಾಗಿದ್ದೇವೆ ಹಾಗು ಧ್ವಂಸಮಾಡಲ್ಪಟ್ಟಿದ್ದೇವೆ ಎಂದು ಭಾವಿಸುತ್ತೇವೆ. ಜೀವನವು ಅನೇಕ ಕೋರಿಕೆಗಳನ್ನು ಒಳಗೊಂಡಿದೆ ಹಾಗು ಪ್ರತಿಯೊಬ್ಬ ವ್ಯಕ್ತಿಯೂ ಸಹ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ಅವರಿಗುಂಟಾಗುವ ತೊಂದರೆಗಳು ವಿಶಿಷ್ಟವಾದವುಗಳು ಮತ್ತು ನಿರಂತರವಾಗಿ ಈ ವ್ಯವಸ್ಥೆಗೆ ಬೆಂಬಲವನ್ನು ನಿರೀಕ್ಷಿಸುತ್ತಿರುತ್ತಾರೆ.

ಮಾರ್ಕ 14:3-9 ರ ವೇದಭಾಗವನ್ನು ಅವಲೋಕಿಸೋಣ. ಇಲ್ಲಿ ನಾವು ಹೆಸರಿಲ್ಲದ ಒಬ್ಬ ಸ್ತ್ರೀಯ ಕುರಿತು ಓದುತ್ತೇವೆ. ಆಕೆಯು ಬಹಳ ಬೆಲೆಬಾಳುವ (ಒಂದು ಗಿಡದ ಬೇರಿನಿಂದುಂಟಾದ) ಸುಗಂದ ತೈಲವನ್ನು ಹೊತ್ತು ತರುವುದನ್ನು ನಾವಿಲ್ಲಿ ಓದುತ್ತೇವೆ. (300 ದಿನಾರ್ ಬೆಲೆ, ಅಂದರೆ ಒಂದು ವರ್ಷದ ಸಂಬಳ) ಆಕೆಯು ಆ ಸೀಸೆಯನ್ನು ಒಡೆದಳು. (ಸೀಲ್) ಮತ್ತು ಯೇಸುಕ್ರಿಸ್ತನನ್ನು ಅಭಿಶೇಕಿಸುವಂತೆ, ಆತನ ತಲೆಯ ಮೇಲೆ ಸುಗಂದ ತೈಲವನ್ನು ಸುರಿದಳು ಮತ್ತು ಆತನನ್ನು ಉತ್ತರಕ್ರೀಯೆಗೋಸ್ಕರ ಸಿದ್ದಪಡಿಸಿದಳು. ಆ ಸ್ತ್ರೀಯು ರಬ್ಬಿಯ ಸ್ಪರ್ಶದ ಅನುಭವವನ್ನು ನಿರೀಕ್ಷಿಸುವವಳಾಗಿದ್ದಳು. ಆದರೆ ಆಕೆಯು ಸಾಮಾನ್ಯ ಸ್ಪರ್ಶಕಿಂತ ಮಿಗಿಲಾಗಿ ಬೆಲೆಕಟ್ಟಲಾರದ ಸ್ಪರ್ಶವನ್ನು ಮಾಡಿದಳು. ಆಕೆಯ ನಂಬಿಕೆಯ ಕುರಿತು ಯೇಸುಕ್ರಿಸ್ತನು ಘೋಷಿಸಿದನು. 'ಈಕೆ ನನಗೆ ಒಳ್ಳೆಯ ಕಾರ್ಯವನ್ನು ಮಾಡಿದ್ದಾಳೆ..... ' (ವ.6) 'ಈಕೆಯು ತನ್ನ ಕೈಲಾಗುವಷ್ಟು ಮಾಡಿದ್ದಾಳೆ..... ' (7). ಆಕೆಯ ಮೇಲೆ ಶಿಷ್ಯರು ಹಾಗು ಅಲ್ಲಿ ನೆರೆದಿದ್ದವರು ತಮ್ಮ ಕೋಪವನ್ನು ಪ್ರದರ್ಶಿಸಿದರು. ಆದರೆ ಆಕೆಗೆ 'ನನ್ನ' ಅಂದರೆ ದೇವರ ಮಗ, ಮೆಸ್ಸೀಯ, ರಕ್ಷಕ, ಸ್ವಸ್ಥತೆಯನ್ನು ಅನುಗ್ರಹಿಸುವವ ಹಾಗು ಬಿಡುಗಡೆ ಮಾಡುವವನ ಕುರಿತು ತಿಳಿದಿದೆ. ಆಕೆಯು ಈ ಕಾರ್ಯ ಮಾಡಿದ್ದರಿಂದ, ನಂತರ ಆ ಹೆಸರಿಲ್ಲದ ಹೆಂಗಸು ಯೇಸುಕ್ರಿಸ್ತನ ಶಿಷ್ಯಳಾದಳು. ಆಕೆಯು "ಯಾರು," ಯಾರು ಪ್ರೀತಿಪಾತ್ರರಾಗಿದ್ದಾರೋ ಅವರಿಗೆ ಒಂದು ಪ್ರೀತಿಸುವ ಸಾಧನವಾದಳು. ಈಗ ಆಕೆಯು ಈ ಪ್ರೀತಿಯನ್ನು ಇತರರಿಗೆ ಹಂಚುವವಳಾದಳು. ಹಾಗು ನೋವುಂಟಾಗಿರುವ ಜನರಿಗೆ ಸ್ವಸ್ಥತೆ ಹಾಗು ಸಂಪೂರ್ಣತೆಯನ್ನು ತರುವವಳಾದಳು. ಕೇವಲ ಒಂದೇ "ಒಂದು" ಸ್ಪರ್ಶ, ಆದರೂ ಅದು ಅಮೂಲ್ಯವಾದ ಸ್ಪರ್ಶವಾಗಿದ್ದು, ಅದು ಆಕೆಯ ಜೀವನದಲ್ಲಿ ಸ್ವಸ್ಥತೆಯ ರೂಪಾಂತರವನ್ನು ತರಲು ಅವಶ್ಯವಾಗಿತ್ತು.

ನಮ್ಮ ಸುತ್ತಲಿರುವ ಹಾಗು ನಮ್ಮ ಕಣ್ಣಿಗೆ ಕಾಣಿಸದಿರುವ ಜನರು ಅಂದರೆ ಆ ಸ್ತ್ರೀಯ ಹಾಗೆ ಇರುವ ಮಕ್ಕಳು, ಹಿರಿಯರು, ಮಾನಸಿಕ ಅಸ್ವಸ್ಥರು, ಬಹಿಸ್ಕರಿಸಲ್ಪಟ್ಟವರು, ಬಂಜೆಯರು, ದೀರ್ಘಕಾಲದ ವೈಧ್ಯಕೀಯ ಚಿಕಿತ್ಸೆಯಲ್ಲಿರುವವರು, ಮಧ್ಯ ವ್ಯಸನಿಗಳು, ಬಲಿಪಶುಗಳಾದವರು, ಸಂಸಾರದಲ್ಲಿ ಹಿಂಸೆಯನ್ನನುಭವಿಸುವವರು, ಮಕ್ಕಳ ಲೈಂಗಿಕ ಕಿರುಕುಳಕ್ಕೊಳಗಾದವರು, ಬೇಡದ ತಾಯಂದಿರು, ವಿವಿಧ ಲೈಂಗಿಕ ದೃಷ್ಟಿಕೋನವನ್ನು ಹೊಂದಿರುವ ಜನರು, ಬೇರೆ ಬೇರೆ ನಂಬಿಕೆಯಲ್ಲಿರುವ ಹಾಗು ಅಂತರ ಜಾತಿಯ ದಂಪತಿಗಳು, ಮತ್ತು ಇತರರ ಕುರಿತು ನಾವು ಒಂದು ಕ್ಷಣ ಮೌನವಾಗಿದ್ದು ಈ ಅದ್ಬುತದ ಕುರಿತು ಯೋಚಿಸೋಣ. ಅವರು ಅನೇಕ ಸಾರಿ ಕೋಪದಿಂದ ತೀರ್ಮಾನಿಸಲ್ಪಟ್ಟು ತಿರಸ್ಕಾರಕ್ಕೆ ಒಳಗಾಗುತ್ತಾರೆ. ಇದು, ಆಕೆಯ ಕುರಿತು ಯೇಸುಕ್ರಿಸ್ತನು ನುಡಿದ ಮಾತುಗಳನ್ನು ಕೇಳಿಸಿಕೊಳ್ಳುವ ಸಮಯವಾಗಿದೆ. "ಈಕೆಯನ್ನು ಬಿಡಿರಿ. ಈಕೆಗೆ ಯಾಕೆ ತೊಂದರೆಕೊಡುತ್ತೀರಿ?" (ವ.6). "ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲೆಲ್ಲಿ ಸಾರಲಾಗುವದೋ ಅಲ್ಲಲ್ಲಿ ಈಕೆ ಮಾಡಿದ್ದನ್ನು ಸಹ ಈಕೆಯ ನೆನಪಿಗಾಗಿ ಹೇಳುವರೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ವ.9b).

**ಪೋಷಣೆಯ ಚಿಂತನೆ**

1. ನಿಮ್ಮಿಂದ ಪ್ರಭಾವಿತರಾಗಿ ತಾತ್ಸಾರಕ್ಕೆ ಒಳಗಾದ ಹಾಗು ನಿರ್ಲಕ್ಷಿಸಲ್ಪಟ್ಟ ನಿಮ್ಮ ಸುತ್ತಲಿರುವ ಹೆಸರರಿಯದ ಜನರನ್ನು ಗುರುತಿಸುವಿರೋ?
2. ನೋವಿನಲ್ಲಿರುವ ಜನರನ್ನು ಹುಡುಕಿ ರಕ್ಷಿಸಲು ನೀವು ವೈಯಕ್ತಿಕವಾಗಿ ಯಾವ ಕಾರ್ಯಗಳನ್ನು ಮಾಡುವಿರಿ?
3. ಸಭೆ ಹಾಗು ವೈಧ್ಯಕೀಯ ಸಂಸ್ಥೆಗಳು ಜೀವ ಕೊಡುವ ಸ್ಪರ್ಶವನ್ನು ಮಾಡಲು ಬೇಕಾದ ವಾಸ್ತವಿಕವಾದ ಮಾರ್ಗವನ್ನು ಸೂಚಿಸುವಿರೋ?

**ಪ್ರಾರ್ಥನೆ:**

ಎಲ್ಲಾ ಮನುಷ್ಯರಿಗೆ ಪ್ರೀಯ ದೇವರಾಗಿರುವವನೇ, ನೋವಿನಲ್ಲಿರುವವರ ಅಗತ್ಯತೆಗಳನ್ನು ಪೂರೈಸಲು ನಮ್ಮ ಕಣ್ಣುಗಳನ್ನು ತೆರೆ. ಪರಿಹಾರಕ್ಕಾಗಿ, ಸ್ವಸ್ಥತೆಗಾಗಿ ಮತ್ತು ಉಜ್ಜೀವನಕ್ಕಾಗಿ ಹಾತೊರೆಯುತ್ತಿರುವ ಜನರ ಕಡೆಗೆ ಈಗ ನಾವು ತಿರುಗಿಕೊಳ್ಳುವಂತೆ ಮಾಡು. ಅವರ ನಂಬಿಕೆ ಹಾಗು ಧೈರ್ಯಕ್ಕೆ ನಡೆಸುವಾತನ ಮೂಲಕ ನಮ್ಮಲ್ಲಿ ಪ್ರತಿಯೊಬ್ಬರೂ ಸಹ ಅವರನ್ನು ಸ್ಪರ್ಶಿಸಿ, ಅವರಿಗೆ ಶಾಂತಿ ಹಾಗು ಪವಿತ್ರತೆಯನ್ನು ಒದಗಿಸುವ ಸಾಧನಗಳಾಗುವಂತೆ ಮಾಡು. ಆಮೇನ್!

**ಡಾ. ಸುನಿತ ನೋರಾನ್ಹಾ**

(ಅಸೋಸಿಯೆಟ್ ಪ್ರೊಫೆಸ್ಸರ್ ಹಾಗು ಪೋಸ್ಟ ಗ್ರಾಡ್ಯುಯೇಟ್ ಪ್ರೋಗ್ರಾಮಿನ ಡೀನ್, ಯೂನಿಯನ್ ಬಿಬ್ಲಿಕಲ್ ಸೆಮಿನರಿ, ಪೂನೆ)

## ರಕ್ಷಕನ ಸ್ಪರ್ಶಕ್ಕೆ ಮುಕ್ತವಾಗುವುದು

**ಮಾರ್ಕ 6:53-56**

ಒಬ್ಬನು ಸೂರ್ಯನ ಉರಿ ಬಿಸಿಲಿನಲ್ಲಿ ಮರಳುಗಾಡಿನಲ್ಲಿ ಪ್ರಯಾಣಿಸುವಾಗ ಕುಸಿದು ಬಿದ್ದನೆಂದು ಹಾಗು ಆತನಿಗೆ ಸ್ವಲ್ಪವೇ ದೂರದಲ್ಲಿ ದೊಡ್ಡ ಜಾಡಿಗಳಲ್ಲಿ ಚೆಲ್ಲುವಷ್ಟು ತಂಪಾದ ನೀರಿದ್ದು, ಅದು ಉಚಿತವಾಗಿ ದೊರೆಯುತ್ತಿದೆ ಎಂದು ಭಾವಿಸಿರಿ. ಆತನಿಗೆ ಸ್ವಲ್ಪವೇ ದೂರದಲ್ಲಿ ಆ ನೀರು ಸಿಗುತ್ತದೆಂಬದು ಆತನಿಗೆ ಗೊತ್ತಿಲ್ಲ. ಬಳಲಿಕೆ ಮತ್ತು ನಿರ್ಜಲೀಕರಣವನ್ನು ಹೋಗಲಾಡಿಸುವ ಜೀವ ಜಲವಿರುವ ಸ್ಥಳವನ್ನು ತಲುಪಲು ಆತನಿಗೆ ತಡೆಯುಂಟಾಗಿದೆ. ಆತನಿಗೆ ಯಾರಾದರೂ ಸಹಾಯ ಮಾಡದಿದ್ದರೆ ಸ್ವಲ್ಪ ಸಮಯದಲ್ಲಿಯೇ ಆತನ ಜೀವ ಹೋಗುವದು.

ಇಂದು ಅನೇಕ ರೀರಿಯ ಅಗತ್ಯತೆಗಳಲ್ಲಿರುವ ಜನರ ಮಧ್ಯದಲ್ಲಿ ನಾವು ಜೀವಿಸುತ್ತಿದ್ದೇವೆ. ಅವು ದೈಹೀಕ, ಭಾವನಾತ್ಮಕ, ಮಾನಸಿಕ, ಸಾಮಾಜಿಕ, ಆರ್ಥಿಕ ಹಾಗು ಆತ್ಮೀಕ ಅಗತ್ಯತೆಗಳಾಗಿದ್ದು ವೈವಿಧ್ಯತೆಯಿಂದ ಕೂಡಿರಬಹುದು. ಅಲ್ಲಿ ಅನೇಕರು ನರಳುತ್ತಿದ್ದು, ಒಂಟಿತನ ಹಾಗು ಖಿನ್ನತೆಗೆ ಒಳಗಾಗಿ ನಿರೀಕ್ಷೆಯನ್ನು ಕಳೆದುಕೊಂಡಿರುತ್ತಾರೆ. ಅಂಥವರಿಗೆ ನಾವು ಸ್ವಸ್ಥತೆ ಮತ್ತು ನಿರೀಕ್ಷೆಯನ್ನು ಒದಗಿಸಿಕೊಡುವುದು ಹೇಗೆ?

**ಇವತ್ತಿನ ವೇದಭಾಗದಲ್ಲಿ ಮೂರು ಪಾಠಗಳನ್ನು ಸಂಕ್ಷಿಪ್ತವಾಗಿ ನೋಡೋಣ.**

**ಮೊದಲನೆಯದಾಗಿ,** ಜನರು ಯೇಸುವನ್ನು ಗುರುತಿಸಿದರು. 5000 ಜನರಿಗೆ ಊಟಮಾಡಿಸಿದ್ದರಿಂದ, ದೆವ್ವ ಹಿಡಿದವರನ್ನು ಬಿಡಿಸದ್ದರಿಂದ, ರೋಗಿಗಳನ್ನು ಸ್ವಸ್ಥಪಡಿಸಿದ್ದರಿಂದ ಹಾಗು ಸತ್ತವರನ್ನು ಎಬ್ಬಿಸಿದ್ದರಿಂದ ಯೇಸುವು ಒಬ್ಬ ಮಹತ್ಕಾರ್ಯಗಳನ್ನು ಮಾಡುವವನು ಎಂದು ಗುರುತಿಸಲ್ಪಟ್ಟನು. ಯಾವುದೇ ವೈದ್ಯರು ಸ್ವಸ್ಥಮಾಡಲಾರದ ರಕ್ತಕುಸುಮ ರೊಗಿಯನ್ನು ಆತನು ಸ್ವಸ್ಥಪಡಿಸಿದ್ದನು. ಆದದರಿಂದ ಯೇಸುಕ್ರಿಸ್ತನ ಶಕ್ತಿ ಹಾಗು ಕರುಣೆಯನ್ನು ಗುರುತಿಸುವುದು ಮೊದಲನೆಯ ಹೆಜ್ಜೆಯಾಗಿದೆ. ನಾವು ಸುವಾರ್ತೆಗಳನ್ನು ಪ್ರಾರ್ಥನಾಪೂರ್ವಕವಾಗಿ ಓದುವಾಗ ನಂಬಿಕೆಯ ಕಣ್ಣುಗಳಿಂದ ಯೇಸುವನ್ನು ನೂತನ ರೀತಿಯಲ್ಲಿ ನೋಡಬಹುದಾಗಿದೆ ಹಾಗು ಯೇಸುಕ್ರಿಸ್ತನ ಸಂಪೂರ್ಣತೆ ಹಾಗು ಸ್ವಸ್ಥತೆಯ ವಾಗ್ದಾನದ ಸ್ಪರ್ಶವನ್ನು ನಾವು ಗುರುತಿಸಬಹುದಾಗಿದೆ.

**ಎರಡನೆಯದಾಗಿ,** ಜನರು ತಾವು ತೊಡಗಿಸಿಕೊಂಡದ್ದನ್ನು ಕೈ ಬಿಟ್ಟರು ಹಾಗು ಯೇಸುಕ್ರಿಸ್ತನು ಎಲ್ಲಿದ್ದನೊ ಅಲ್ಲಿಗೆ ರೋಗಿಗಳನ್ನು ಕರೆತಂದರು. ಅವರು ರೋಗಿಗಳನ್ನು ಚಾಪೆಗಳಲ್ಲಿ ಹೊತ್ತುಕೊಂಡು ಯೇಸುವಿನ ಬಳಿಗೆ ಅವಸರದಿಂದ ಬಂದರು. ಇವತ್ತು ನಾವೆಲ್ಲರೂ ಅವಿಶ್ರಾಂತರಾಗಿದ್ದು, ಯಾವುದೇ ವ್ಯಕ್ತಿಗೆ ಸಹಾಯ ಮಾಡುವ ಸ್ಥಿತಿಯಲ್ಲಿ ಇಲ್ಲ. ಅಗತ್ಯತೆಯಲ್ಲಿರುವವರು, ಮುರಿದ ಮನಸ್ಸಿನವರು, ದೌರ್ಜನ್ಯಕ್ಕೆ ಒಳಗಾದವರು, ನೋವಿನಲ್ಲಿರುವವರು, ಬಡವರು, ಒಂಟಿತನದಲ್ಲಿರುವವರು ನಮ್ಮ ಸುತ್ತಲಿರುವುದನ್ನು ನಾವು ಆಗಾಗ್ಗೆ ಕಡೆಗಣಿಸುತ್ತಿರುತ್ತೇವೆ. ಈ ವಿಷಯದಲ್ಲಿ ನಾವು ದೇವರನ್ನು ಕ್ಷಮೆ ಕೇಳಬೇಕಾಗಿದೆ. ಹಾಗು ಈ ಕುರಿತು ನಾವು ಹೆಚ್ಚು ಸೂಕ್ಷ್ಮ ಮತಿಗಳಾಗಿಯೂ ಕರುಣೆಯುಳ್ಳವರಾಗಿಯೂ ಇರಬೇಕಾಗಿದೆ. ಹಾಗಿದ್ದರೆ ಮಾತ್ರ ನಾವು ಈ ಜನರನ್ನು ತಲುಪಿ, ಯೇಸುಕ್ರಿಸ್ತನ ಸಂಪರ್ಕವನ್ನು ಜೋಡಿಸಿ, ಅವರ ಜೀವನದಲ್ಲಿ ಯೇಸುವಿನ ಸ್ಪರ್ಶವನ್ನು ದೊರಕಿಸಿಕೊಡಬಹುದಾಗಿದೆ.

**ಮೂರನೆಯದಾಗಿ,** ಯೇಸುಕ್ರಿಸ್ತನ ಬಟ್ಟೆಯ ಗೊಂಡೆಯನ್ನು ಮುಟ್ಟಿದವರೆಲ್ಲರೂ ಸ್ವಸ್ಥರಾದರು. ಕೇವಲ ಕೆಲವರು ಮಾತ್ರವಲ್ಲ ಎಲ್ಲರೂ ಸ್ವಸ್ಥರಾದರು. 'ಯೇಸುವಿನ ಸ್ಪರ್ಶದ' ಸ್ವಸ್ಥತೆಯ ತಂತ್ರವು ಮತ್ತೊಂದಾವರ್ತಿ ಕಾರ್ಯಮಾಡುವಂತದ್ದಾಗಿದೆ. ಯೇಸುಕ್ರಿಸ್ತನ ಸ್ವಸ್ಥಮಾಡುವ ಹಾಗು ಉಜ್ಜೀವನಗೊಳಿಸುವ ಶಕ್ತಿಯನ್ನು ನಾವು ನಂಬಲೇಬೇಕಾಗಿದೆ. ಯೇಸುಕ್ರಿಸ್ತನು ಎಲ್ಲಾ ಮನುಷ್ಯರನ್ನು ಪ್ರೀತಿಸುತ್ತಾನೆ ಹಾಗು ನಮ್ಮ ಮೊರೆಗೆ ಉತ್ತರಿಸಿ ಸಹಾಯಮಾಡುತ್ತಾನೆ ಎಂಬದನ್ನು ಸಹ ನಾವು ನಂಬಲೇಬೇಕಾಗಿದೆ. ನಾವು ನಿಜವಾಗಿಯೂ ಯೇಸುಕ್ರಿಸ್ತನ ಶಕ್ತಿಯನ್ನು ನಂಬುವುದಾದರೆ, ಅಗತ್ಯತೆಯಲ್ಲಿರುವ ಜನರಿಗಾಗಿ ನಾವು ಪ್ರಾರ್ಥಿಸುತ್ತೇವೆ. ಹಾಗು ನಾವು ಯೇಸುಕ್ರಿಸ್ತನ ಪ್ರೀತಿಯನ್ನು ಹಂಚುತ್ತೇವೆ ಮತ್ತು ಯೇಸುಕ್ರಿಸ್ತನ ಸ್ವಸ್ಥತೆಯ ಸ್ಪರ್ಶವನ್ನು ಹೊಂದಲು ಅವರನ್ನು ಆಹ್ವಾನಿಸುತ್ತೇವೆ.

**ಪೋಷಣೆಯ ಚಿಂತನೆ**

1. ಯೇಸುಕ್ರಿಸ್ತನ ಶಕ್ತಿ ಹಾಗು ಕರುಣೆಯನ್ನು ಮತ್ತಷ್ಟು ಉತ್ತಮವಾಗಿ ತಿಳಿದುಕೊಳ್ಳುವ ಮಾರ್ಗದ ಕುರಿತು ಈ ವಾರ ಯೋಚಿಸಿರಿ.
2. ದಿನಕ್ಕೆ ಕನಿಷ್ಟ ಒಬ್ಬ ಅಗತ್ಯತೆಯಲ್ಲಿರುವ ವ್ಯಕ್ತಿಗೆ ಸಹಾಯಮಾಡಲು ಸಮಯವಾಗುವಂತೆ ನಿಮ್ಮ ಜೀವನವನ್ನು ಹೇಗೆ ನೀವು ಮರುಹೊಂದಿಸುವಿರಿ?
3. ಯೇಸುವಿನ ಸ್ಪರ್ಶವು ನಿಜವಾಗಿಯೂ ಅಖಂಡವಾಗಿ ಎಲ್ಲಾ ಜನರಿಗೆ ಸ್ವಸ್ಥತೆಯನ್ನು ಉಂಟುಮಾಡುವುದೆಂದು ನೀವು ಪ್ರಾಮಾಣಿಕವಾಗಿ ನಂಬುವಿರೋ?

**ಪ್ರಾರ್ಥನೆ:**

ಪ್ರೀಯ ಕರ್ತನಾದ ಯೇಸುವೇ, ನೀನು ಪ್ರಬಲವಾದ ಹಾಗು ಸಹಾನುಭೂತಿ ಹೊಂದಿರುವ ವೈದ್ಯನೆಂಬದನ್ನು ಗುರುತಿಸಲು ನನಗೆ ಸಹಾಯ ಮಾಡು. ನನ್ನ ಅಪನಂಬಿಕೆಯಿಂದ, ಸ್ವಾರ್ಥದಿಂದ ಹಾಗು ಕರುಣೆಯಿಲ್ಲದ ಮನಃಸ್ಥಿತಿಯಿಂದ ನಾನು ಹೊರಬರಲು ದಯವಿಟ್ಟು ನನ್ನನ್ನು ಸಕ್ರಿಯಗೊಳಿಸು. ನಾನು ಇತರರನ್ನು ನಿನ್ನ ಬಳಿಗೆ ನಡೆಸಲು ಸಹಾಯಮಾಡಲು, ಇವತ್ತು ನಿನ್ನ ಸ್ಪರ್ಶವನ್ನು ನಾನು ಅನುಭವಿಸುವಂತೆ ಮಾಡು.

**ಡಾ. ಶ್ರೀಮತಿ. ವಸಂತ ಥೋಮಸ್**

ನೇಶನಲ್ ಡೈರೆಕ್ಟರ್, ಅರ್ಪಣಾ ಮಿನಿಸ್ಟ್ರೀಸ್, ಪೂನೆ

## ಸ್ವಸ್ಥತೆಯೆಡೆಗೆ ನಂಬಿಕೆಯ ಯಾತ್ರೆ

**ಲೂಕ 8:44-46**

ನಂಬಿಕೆ ಹಾಗು ಕರುಣೆಯು ನಮ್ಮ ದಿನನಿತ್ಯದ ಜೀವನದಲ್ಲಿ ನಿರೀಕ್ಷೆಯಿಂದ ಜೀವಿಸುವಂತೆ ನಮ್ಮನ್ನು ಬಲಪಡಿಸುತ್ತದೆ. ನಂಬಿಕೆಯು ನಮಗೆ ರಕ್ಷಣೆ, ಸ್ವಸ್ಥತೆ ಹಾಗು ಮನಶ್ಯಾಂತಿಯನ್ನು ದಯಪಾಲಿಸುತ್ತದೆ. ನಂಬಿಕೆಯು ನಮ್ಮಲ್ಲಿ ಉಜ್ಜೀವನವನ್ನು, ಅನ್ಯೋನ್ಯತೆಯನ್ನು ಹಾಗು ಅಂಗೀಕಾರವನ್ನು ಉಂಟುಮಾಡುತ್ತದೆ. ಒಬ್ಬ ವ್ಯಕ್ತಿಯಲ್ಲಿ ನಂಬಿಕೆಯಿದ್ದಾಗ ಅಲ್ಲಿ ಸ್ವಸ್ಥತೆಯ ಬಲವು ಹೊರಡುತ್ತದೆ. ಲೂಕ 8:46ರಲ್ಲಿ ಯೇಸುಕ್ರಿಸ್ತನು ಹೀಗೆ ಹೇಳಿದನು, 'ನನ್ನಿಂದ ಶಕ್ತಿಯು ಹೊರಟಿತೆಂಬದು ನನಗೆ ಗೊತ್ತಾಯಿತು.,' ಆತನು ಸ್ವತಃ ಮೌಕೀಕವಲ್ಲದ ಎರಡು ವಿಷಯಗಳನ್ನು ಮಂಡಿಸಿದನು. ಯೇಸುಕ್ರಿಸ್ತನು ದೈವೀಕ ಶಕ್ತಿಯನ್ನು ಹೊಂದಿರುವ ಸತ್ಯ ಹಾಗು ತನ್ನಲ್ಲಿರುವ ಸಾಮರ್ಥ್ಯದ ಕುರಿತಾದ ಬಲವನ್ನು ಇತರರಿಗೆ ಮನದಟ್ಟು ಮಾಡುವುದು. ಯೇಸುಕ್ರಿಸ್ತನು ಶಾರೀರಿಕವಾಗಿ ತನ್ನನ್ನು ಹಾಗು ತನ್ನಲ್ಲಿರುವ ಸ್ವಸ್ಥತೆಯ ಸಾಮರ್ಥ್ಯವನ್ನು ಬಹಿರಂಗಪಡಿಸಿದನು.

ಈ ಸನ್ನಿವೇಶದಲ್ಲಿ, ಯೇಸುಕ್ರಿಸ್ತನ ಸ್ವಸ್ಥತೆಯ ಶಕ್ತಿ ಹಾಗು ರಕ್ಷಿಸುವ ನಂಬಿಕೆಯ ಪ್ರತಿಕ್ರಿಯೆಯ ಪರಸ್ಪರ ಹೊಂದಾಣಿಕೆಯಿದೆ. 'ನಂಬಿಕೆ' ಎಂಬ ಪದವನ್ನು ಹೈಲೈಟ್ ಮಾಡಲಾಗಿದೆ. ಮತ್ತು ಯೇಸುಕ್ರಿಸ್ತನ ಭಾಷಣವು ಸ್ವಸ್ಥತೆಯ ಸಂದರ್ಭದ ಕುರಿತು ಅರಿವನ್ನು ಹುಟ್ಟಿಸುತ್ತದೆ. ರಕ್ತಕುಸುಮ ರೋಗಿಯಾದ ಸ್ತ್ರೀಯ ನಂಬಿಕೆಯು ಮೇರೆಯ ಒಳಗೆ ಹಾಗು ಸಮಾಜದ ಕಟ್ಟುಪಾಡಿನ ಮತ್ತು ವಿಶೇಷವಾಗಿ ದೇಶದ ಕಾನೂನಿನ ಪರಿದಿಯಲ್ಲಿ ಪರೀಕ್ಷಿಸಲ್ಪಟ್ಟಿತು. ಹೀಗಿದ್ದರೂ ಸಹ, ಎಲ್ಲಾ ಮಾನವ ನಿರ್ಮಿತ ಕಟ್ಟುಪಾಡುಗಳು ಹಾಗು ಮೇರೆಯನ್ನು ದಾಟಿ ಸ್ವಸ್ಥಮಾಡಬಲ್ಲಾತನಾದ ಯೇಸುಕ್ರಿಸ್ತನ ಮೇಲೆ ಆಕೆಗೆ ನಂಬಿಕೆಯು ತೋರ್ಪಡಿಸಲ್ಪಟ್ಟಿತು. ಆಕೆಯ ನಂಬಿಕೆಯು ಕೇವಲ ಆಕೆಯ ದೈಹಿಕ ಅಸ್ವಸ್ಥತೆಯನ್ನು ಮಾತ್ರ ಸ್ವಸ್ಥಮಾಡಲಿಲ್ಲ, ಬದಲಿಗೆ ಆಕೆಯ ವ್ಯಕ್ತಿತ್ವವು ಸ್ವಸ್ಥಗೊಂಡು ಉಜ್ಜೀವನವಾಯಿತು.

ಸ್ಪರ್ಶವು ಬಹಳ ಶಕ್ತಿಯುತವಾದದ್ದು. ನಾವು ನಮ್ಮ ಮಾತು, ಕ್ರೀಯೆ ಹಾಗು ವರ್ತನೆಗಳ ಮೂಲಕ ಇತರರನ್ನು ಸ್ಪರ್ಶಿಸುತ್ತೇವೆ. ದೇವರು ರೋಗಿಗಳು, ನರಳುವವರು, ಬಡವರು, ದೌರ್ಜನ್ಯಕ್ಕೆ ಒಳಗಾದವರು ಹಾಗು ತುಳಿತಕ್ಕೊಳಗಾದವರಿಗೂ ಸಹ ದೇವರಾಗಿದ್ದಾನೆ. ಈಗಿನ ಸಮಯವು ಅಸಮಾನತೆ, ವೈವಿಧ್ಯತೆ, ಅನ್ಯಾಯ, ಲೈಂಗಿಕ ತಾರತಮ, ಬಡತನ, ಅತ್ಯಾಚಾರ, ವಿವಿಧ ರೀತಿಯ ಬಿಕ್ಕಟ್ಟು ಮತ್ತು ಸಾಮಾಜಿಕ ಅವಿಶ್ರಾಂತಿಯು ನಮ್ಮ ಮನಸ್ಸುಗಳನ್ನು ಕೆಡಿಸುವ ಸವಾಲುಗಳನ್ನು ಎದುರಿಸಬೇಕಾಗಿದೆ. ಅಲ್ಲಿ ಕೆಲವು ಗಡುಸಾದ ಮತ್ತು ಮೃದುವಾದ ಅಗಲುವಿಕೆಗಳಿದ್ದು, ಇಂದು ಅವೆಲ್ಲಕ್ಕೆ ಸ್ವಸ್ಥತೆಯ ಅಗತ್ಯವಿದೆ. ನಮ್ಮನ್ನು ಮುರಿದ ಸ್ಥಿತಿಯಿಂದ ಸ್ವಸ್ಥತೆಯೆಡೆಗೆ ನಡೆಸಲು ಯೇಸುಕ್ರಿಸ್ತನ ಸ್ಪರ್ಶದ ಶಕ್ತಿಯ ಅಗತ್ಯತೆಯಿದೆ. ಅಗತ್ಯತೆಯಲ್ಲಿರುವ ಜನರಿಗೆ ಸರಿಯಾದ ಸಮಯದಲ್ಲಿ ಅದೇ ಶಕ್ತಿಯನ್ನು ನಿಯೋಜಿಸಬೇಕಾಗಿದೆ.

ಆ ಸ್ತ್ರೀಯ ನಂಬಿಕೆಯ ಫಲವಾಗಿ ಯೇಸುಕ್ರಿಸ್ತನು ಆ ಸ್ತ್ರೀಯನ್ನು ಅಂಗೀಕರಿಸಿದನು ಹಾಗು ಉಜ್ಜೀವನಗೊಳಿಸಿದನು. ನಂಬಿಕೆಯ ಯಾತ್ರೆಯಲ್ಲಿ ನಾವು ಇಂದು ಪ್ರಯಾಣಮಾಡುವಾಗ ನಾವು ಅನೇಕ ಮೇರೆಗಳಿಂದ ಹಾಗು ಜೀವನದ ಪರಿಸ್ಥಿತಿಗಳಿಂದ ಪರೀಕ್ಷೆಗೆ ಒಳಗಾಗುತ್ತೇವೆ. ಕಾಯಿಲೆಯಿಂದ ತಿರಸ್ಕರಿಸಲ್ಪಡುವುದು, ಭಯ, ಅಪರಾಧ ಮನೋಭಾವನೆ, ನಿರೀಕ್ಷೆ ಕಳೆದುಕೊಳ್ಳುವಿಕೆ, ಅನುಮಾನ ಮತ್ತು ಕುರುಡು ಮನುಷ್ಯತ್ವ ಮುಂತಾದವುಗಳ ಮಧ್ಯದಲ್ಲಿ, ನಾವು ನಂಬಿಕೆಯ ಪ್ರಯಾಣದಲ್ಲಿರುವಾಗ ದೇವರ ಸ್ವಸ್ಥತೆಯ ಸ್ಪರ್ಶದ ಕಡೆಗೆ ನಮ್ಮ ಮನಸ್ಸನ್ನು ಕೇಂದ್ರೀಕರಿಸಬೇಕಾಗಿದೆ. ನಮ್ಮ ಸುತ್ತಲೂ ಅನೇಕ ಸಂಗತಿಗಳು ಸಂಭವಿಸುತ್ತಿರುವಾಗ, ನಂಬಿಕೆ ಹಾಗು ಕೃಪೆಯಿಂದ ತುಂಬಿದ ಪ್ರೀತಿಯ ಜೀವನದಲ್ಲಿ ಸುಲಭವಾಗಿ ಚಂಚಲವಾಗುವ ಸಾಧ್ಯತೆಯಿದೆ. ನಾವು ಪ್ರತಿನಿತ್ಯ ವಿವಿಧ ರೀತಿಯಲ್ಲಿ ದೈತ್ಯರನ್ನು ಎದುರುಗೊಳ್ಳುತ್ತೇವೆ ಮತ್ತು ನಾವು ಉದ್ದೇಶಪೂರ್ವಕವಾಗಿ ಜಿನುಗುವ ಹಾಗು ಗುಣಗುಟ್ಟುವ ವರ್ತನೆಯನ್ನು ವೃದ್ಧಿಸಿಕೊಳ್ಳುತ್ತೇವೆ. ಅಂತಹ ಸಮಯಗಳಲ್ಲಿ, ನಮ್ಮ ನಂಬಿಕೆಯನ್ನು ಹಾಗು ನಮ್ಮ ನಿಲುವನ್ನು ಪ್ರಶ್ನಿಸಿಕೊಂಡು ದೇವರ ಎದುರು ನಿಲ್ಲಬೇಕಾಗುತ್ತದೆ. ಭಯ ಮತ್ತು ಸಂಶಯಗಳು ನಾವು ತೆವಳುವಂತೆ ಮಾಡಿ, ದೇವರು ನಮ್ಮ ಪ್ರಾರ್ಥನೆಗೆ ಉತ್ತರಿಸುವನೆಂಬದನ್ನು ಮರೆತುಬಿಡುವಂತೆ ಮಾಡುತ್ತದೆ. ಇಂತಹ ಸಂದರ್ಭಗಳಲ್ಲಿ, ಸ್ವಸ್ಥತೆಗಾಗಿ ಯೇಸುಕ್ರಿಸ್ತನ ಶಕ್ತಿಯ ಸ್ಪರ್ಶವನ್ನು ಸಮೀಪಿಸುವಾಗ ಉಜ್ಜೀವನ ಮತ್ತು ಆರೋಗ್ಯವು ನಮಗೆ ದೊರಕುತ್ತದೆ.

**ಪೋಷಣೆಯ ಚಿಂತನೆ**

1. ನಾವು ಸ್ವಸ್ಥರಾಗಿ, ದೇವರು ನಮಗೆ ಅನುಗ್ರಹಿಸಿದ ಸ್ವಸ್ಥತೆಯ ಶಕ್ತಿಯ ಕಾಲುವೆಯನ್ನು ವ್ಯರ್ಥಮಾಡುತ್ತಿದ್ದೇವೋ?
2. ನಾವು ಮೇರೆಯನ್ನು ದಾಟಿ ದೇವರಿಂದ ನಮಗೆ ದೊರಕಿದ ಶಕ್ತಿಯನ್ನು ಉಪಯೋಗಿಸಿ ಜನರನ್ನು ಸ್ಪರ್ಶಿಸಿ ಸ್ವಸ್ಥಗೊಳಿಸುತ್ತಿದ್ದೇವೋ?

**ಪ್ರಾರ್ಥನೆ:**

ದೇವರೇ, ನಮ್ಮ ಪ್ರಯಾಣದಲ್ಲಿ ನಿನ್ನನ್ನು ನಂಬಿಕೆಯಿಂದ ಸ್ಪರ್ಶಿಸಲು ನಮಗೆ ಸಹಾಯ ಮಾಡು. ಈ ಜೀವನದಲ್ಲಿ ನಿನ್ನ ಮೇಲೆ ನಂಬಿಕೆಯನ್ನಿಟ್ಟು ಜೀವಿಸುತ್ತಿರುವಾಗ ನಿನ್ನಿಂದ ಸ್ಪರ್ಶಿಸಲ್ಪಡಲು ನಮಗೆ ಸಹಾಯ ಮಾಡು. ನಮ್ಮನ್ನು ಉಜ್ಜೀವನಗೊಳಿಸು, ಸ್ವಸ್ಥಪಡಿಸು. ನಿನ್ನ ಕರೆಗೆ ಯೊಗ್ಯವಾಗಿ ಜೀವಿಸಲು ಪ್ರೀತಿ, ಶಾಂತಿ ಹಾಗು ಸಂತೊಷದ ಆತ್ಮನನ್ನು ನಮ್ಮೊಳಗೆ ನೆಲೆಗೊಳಿಸು.

**ಕುಮಾರಿ. ಇಮ್ಮಿಮೆನ್ನಾ ಐಯ್ಯರ್**
ಸೆಕರೇಟರಿ – ಚೇಪ್ಲಿನ್ಸ್ ಸ್ಕೆಷನ್ – CMAI

**5ನೇ ದಿನ, ಗುರುವಾರ, 14ನೇ ಫೆಬ್ರವರಿ,2019** **ವಿಷಯ: ನನ್ನನ್ನು ಮುಟ್ಟಿದವರಾರು?**

## ನಂಬಿಕೆಯಿಂದ ಮುಟ್ಟುವುದು ದೇವರ ಪ್ರತಿಕ್ರೀಯೆಯನ್ನು ಆಹ್ವಾನಿಸುವುದಾಗಿದೆ

**ಮಾರ್ಕ 5:21-34 ಮತ್ತು ಲೂಕ 8:42 b -48**

ರಕ್ತಕುಸುಮ ರೋಗಿಯು ಸ್ವಸ್ಥವಾದದ್ದು ನಂಬಿಕೆಯ ಸ್ಪರ್ಶದ ಕಥೆಯಾಗಿದೆ. ವಾಸ್ತವವಾಗಿ ಹೆಸರಿಲ್ಲದ ಆ ಸ್ತ್ರೀಯು ಅಶುದ್ಧಳಾಗಿದ್ದಳು ಹಾಗು ಸಾಮಾಜಿಕವಾಗಿ ಅಸ್ಪ್ರಶ್ಯಳಾಗಿದ್ದಳು. ಆದದರಿಂದ, ಆಕೆಯನ್ನು ಅನ್ಯೋನ್ಯತೆ ಹಾಗು ದಾರ್ಮಿಕ ಜೀವನದಿಂದ ದೊರವಿಡಲಾಗಿತ್ತು. ಬಹಳ ವರ್ಷಗಳಿಂದ ವೈದ್ಯಕೀಯ ವೃತ್ತಿಪರರಲ್ಲಿ ಅನೇಕರು ಆಕೆಗೆ ತಂದ ಡೋಲಾಯಮಾನವಾದ ಸ್ಥಿತಿಯಿಂದಾಗಿ, ಆಕೆಗೆ ಉಂಟಾದ ಸೋಚನೀಯ ಪರಿಸ್ಥಿತಿ ಹಾಗು ಆಕೆಯು ಕಳೆದ ನೋವಿನ ಅನುಭವದಿಂದಾಗಿ ಯೇಸುಕ್ರಿಸ್ತನನ್ನು ಸಮೀಪಿಸುವುದು ಮಾತ್ರ ಆಕೆಗೆ ಇದ್ದ ಏಕೈಕ ಮಾರ್ಗವಾಗಿತ್ತು.

ಇನ್ನೂ ಹೇಳುವುದಾದರೆ, ಅನೇಕ ಅಗತ್ಯತೆಯಲ್ಲಿರುವವರು ಯೇಸುಕ್ರಿಸ್ತನ ಸುತ್ತಲೂ ಮುತ್ತಿಕೊಂಡಿದ್ದರಿಂದಾಗಿ ಅವರ ಮಧ್ಯದಲ್ಲಿ ಆಕೆಯು ಕಳೆದುಹೋಗಿದ್ದಳು ಹಾಗು ಬಹುಶಃ ಅದು ಅಕೆಯ ಕೊನೆಯ ನಿರೀಕ್ಷೆಯಾಗಿತ್ತು. ಆಕೆಯ ಅಚಲವಾದ ನಂಬಿಕೆ ಮತ್ತು ಧೈರ್ಯದಿಂದಾಗಿ ಆಕೆಯು ಯೇಸುವಿನ ಗಮನವನ್ನು ತಕ್ಷಣ ಸೆರೆಹಿಡಿದು ಯಾಯೀರನ ಮಗಳನ್ನು ಸ್ವಸ್ಥಮಾಡಲು ಹೋಗುತ್ತಿದ್ದ ಯೇಸುವನ್ನು ನಿಲ್ಲಿಸಿದಳು.

ಬಹುಶಃ ತಾನು ಗ್ರಹಿಸುವುದಕ್ಕಿಂತ ಶೀಘ್ರವಾದ ಪ್ರತಿಕ್ರೀಯೆಯನ್ನು ಯೇಸುಕ್ರಿಸ್ತನು ದಯಪಾಲಿಸಿದನು. ಆತನಿಂದ ಸ್ವಸ್ಥತೆಯ ಶಕ್ತಿಯು ಹರಿದು ಹೋಯಿತು ಹಾಗು ಆಕೆಯಲ್ಲಿ ಹರಿಯುತ್ತಿದ್ದ ರಕ್ತವು ತಕ್ಷಣ ನಿಂತುಹೋಯಿತು! ಆಕೆಯು ಅದನ್ನೇ ನಿರೀಕ್ಷಿಸುತ್ತಿದ್ದಳು - ದೈಹೀಕ ಸ್ವಸ್ಥತೆ.

ಆದರೆ ಯೇಸುಕ್ರಿಸ್ತನು ಮತ್ತೊಂದು ಹಂತದ ಸ್ವಸ್ಥತೆಯ ಕಡೆಗೆ ಆಕೆಯನ್ನು ನಡೆಸಿದನು. ಯೇಸುವಿನ ಮುಖಾಮುಖಿಯಾದ ಪ್ರಶ್ನೆ, **"ನನ್ನನ್ನು ಮುಟ್ಟಿದವರಾರು?"** ಅದು ಆತನ ಬಟ್ಟೆಯನ್ನು ಮುಟ್ಟಿರುವ ವ್ಯಕ್ತಿಯನ್ನು ಬಹಿರಂಗಪಡಿಸುವುದು ಮಾತ್ರವಲ್ಲ, ಆಕೆಯು ರಕ್ತಸ್ರಾವದ ಭಯದಿಂದ ಹೊರಬರುವುದು ಸಹ ಆಗಬೇಕಾಗಿತ್ತು ಹಾಗು ಸ್ವಸ್ಥವಾದ ಆ ಘಟನೆಯನ್ನು ಸಾರ್ವಜನಿಕವಾಗಿ ಸಾಕ್ಷೀಕರಿಸುವ ಅಗತ್ಯತೆಯಿತ್ತು.

ಅಸಮಾನ್ಯವಾದ ಸ್ಪರ್ಶದ ಕುರಿತು ಪೇತ್ರನು ಆಶ್ಚರ್ಯಚಕಿತನಾದಾಗ, ಆಕೆಯು ಕೇವಲ ದೇವರ ಕಾರ್ಯದ ಕಾಲುವೆಯಾಗಿರಲಿಲ್ಲ, ಬದಲಿಗೆ ದೈವೀಕ ಶಕ್ತಿಯ ನಿಜವಾದ ಸಂಪನ್ಮೂಲವಾಗಿದ್ದು ಯೇಸುವಿನ ಅಧಿಕಾರಯುಕ್ತ ಕಾರ್ಯವು ಅದರಲ್ಲಿ ತಿಳಿದುಬರುತ್ತದೆ.

ಯೇಸುವು ಆಕೆಯನ್ನು **"ಮಗಳೇ"** ಎಂಬದಾಗಿ ಕರೆದನು. (ಸಮಾಜವು ಯಾರನ್ನು ಅಶುದ್ಧಳೆಂದು ನಿರ್ಣಯಿಸಿತ್ತೋ ಆಕೆಯನ್ನು) ಮತ್ತು ಆತನು, **"ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು"** ಎಂದು ಹೇಳಿದನು. ಆಕೆಯನ್ನು ದೇವರ ಕುಟುಂಬಕ್ಕೆ ಹಾಗು ದೂರವಿಟ್ಟಿದ ಸಮಾಜಕ್ಕೆ ಆಹ್ವಾನಿಸಿ ಭರವಸೆಯನ್ನು ಕೊಟ್ಟನು.

ಆತನ **"ಸಮಾಧಾನ"** ಎಂಬ ಪದಬಳಕೆಯಿಂದ (ಲೂಕ 8:48), ದೇವರೊಂದಿಗಿರುವ ಸರಿಯಾದ ಸಂಬಂಧಕ್ಕೆ ಹಾಗು ನಂಬಿಕೆಯ ಸಮಾಜಕ್ಕೆ ಯೇಸುಕ್ರಿಸ್ತನು ಆಕೆಯನ್ನು ಆಹ್ವಾನಿಸಿದನು ಮತ್ತು ಮಾನವೀಯತೆಯಿಂದ ಕೂಡಿದವನಾಗಿ ಆಕೆಯನ್ನು ಸಂಪೂರ್ಣವಾಗ ಉಜ್ಜೀವನಗೊಳಿಸಿದನು. ಇದು ಆಕೆಯ ನಂಬಿಕೆಯ ಸ್ಪರ್ಶಕ್ಕೆ ದೇವರು ಕೊಟ್ಟ ಪ್ರತಿಕ್ರೀಯೆಯಾಗಿದೆ.

ಹೇಗೂ, ಈ ಘಟನೆಯಿಂದ ತಡವಾಯಿತು. ಆಕೆಯು ಹೀಗೆ ಮಾಡಿದ್ದರಿಂದ ಯಾಯೀರನ ಮಗಳನ್ನು ಬದುಕಿಸುವ ತಡವಾಯಿತು, ಆದರೆ ಯೇಸುವು ತಡವಾಗಿ ಆಕೆಯನ್ನು ಎಬ್ಬಿಸಿದನು! ಏನೇ ಆಗಲಿ, ಈ ಕಥೆಯು ಪರಸ್ಪರ ನಂಬಿಕೆಯ ಸ್ಪರ್ಶಕ್ಕೆ ಮಹತ್ವವನ್ನು ನೀಡುತ್ತದೆ. ಅದು ದೇವರ ತಕ್ಷಣ ಪ್ರತಿಕ್ರೀಯೆಯನ್ನು ಹೊರಹೊಮ್ಮಿಸುತ್ತದೆ. ಇಂದಿನ ಪ್ರಪಂಚದಲ್ಲಿ ಮುರಿದ ಹೃದಯಿಗಳು, ಸಮಾಜದ ಅಂಚಿನಲ್ಲಿರುವವರು, ಹೆಸರಿಲ್ಲದವರು, ಹಾಗು ಗುಂಪಿನಲ್ಲಿ ಕಳೆದುಹೋದ ಮತ್ತು ಮನುಷ್ಯರೆಂದು ಗುರುತಿಸಲ್ಪಡದ ಜನರನ್ನು ಯೇಸುಕ್ರಿಸ್ತನು ಕಾಳಜಿವಹಿಸಿದಂತೆಯೇ, ಇಂದು ನಂಬಿಕೆಯ ಸಮಾಜಕ್ಕೆ ಹಾಗು ಭಾರತ ದೇಶದಲ್ಲಿರುವ ಕಾಳಜಿಯ ಸಂಸ್ಥೆಗಳಿಗೆ ಆದೇಶವನ್ನು ಕೊಟ್ಟು, ಆತನನ್ನು ಅನುಕರಿಸುವಂತೆ ಮಾಡುತ್ತಿದೆ.

**ಪೋಷಣೆಯ ಚಿಂತನೆ**

1. ನಮ್ಮ ಸ್ವಸ್ಥತೆಯ ಸೇವೆಗಳು ಹಾಗು ಕಾರ್ಯಗಳು ದೈಹೀಕ ಸ್ಪರ್ಶದ ಆಚೆಗೆ ಹೋಗಿ, ಆಳವಾದ ಮಾನವ ಜೀವನದ ಮಟ್ಟವನ್ನು ನಾವು ಹೇಗೆ ಸ್ಪರ್ಶಿಸಬಹುದು?
2. ನಂಬಿಕೆಯ ಸಮಾಜ ಹಾಗು ಕಾಳಜಿ ವಹಿಸುವ ಸಂಸ್ಥೆಗಳಾದ ನಾವು ಸೂಕ್ಷ್ಮಮತಿಗಳಾಗಿ, ಈ ಪ್ರಪಂಚದ "ಗುಂಪಿನಲ್ಲಿ" ಕಳೆದುಹೋದ ಜನರೊಂದಿಗೆ ಯಾವ ರೀತಿಯಲ್ಲಿ ವರ್ತಿಸಬೇಕು?

**ಪ್ರಾರ್ಥನೆ:** ಓ ದೇವರೇ, ನಿನ್ನ ಬಳಿಗೆ ಬರುವವರನ್ನು ನೀನು ಎಂದಿಗೂ ತಿರಸ್ಕರಿಸುವುದಿಲ್ಲ. ಹಾಗೆಯೇ, ಈ ಲೋಕದಲ್ಲಿ ಗುಂಪಿನಲ್ಲಿ ಕಳೆದುಹೋದವರ ಕುರಿತು ಸೂಕ್ಷ್ಮ ಮಿತಿಯಾಗಿರುವುದು ಮಾತ್ರವಲ್ಲ, ಬದಲಿಗೆ ಅವರೊಂದಿಗೆ ಕಾರ್ಯಮಾಡಲು ನನಗೆ/ನಮಗೆ ಸಹಾಯಮಾಡು. ಸಂಪರ್ಕಿಸುವ ಮತ್ತು ಕಾಳಜಿ ತೋರುವ ಸಂಸ್ಥೆಗಳಾದ ನಮ್ಮ ಕರೆಯನ್ನು ನಾವು ಅರಿತುಕೊಂಡು ನನ್ನ / ನಮ್ಮ ನಂಬಿಕೆಯನ್ನು ಪರೀಕ್ಷಿಸಿಕೊಂಡವರಾಗಿ, ಯೇಸುಕ್ರಿಸ್ತನಲ್ಲಿ ಒಳಗೂ ಹೊರಗೂ ಹಾಗು ಲೋಕದಲ್ಲಿ ಸಾಕ್ಷೀಕರಿಸಲು ನಮಗೆ ಸಹಾಯ ಮಾಡು. ಆಮೇನ್.

ಫಾ. ಡಾ। ಜಾರ್ಜ್ ವರ್ಗೀಸ್
ಯೂನಿಯನ್ ಬಿಬ್ಲಿಕಲ್ ಸೆಮಿನರಿ, ಪೂನೆ

## ವಿಶೇಷ ಸ್ಪರ್ಶದ ಮಹತ್ವ : ತಿರಸ್ಕಾರದಿಂದ ಪುನಃಸ್ಥಾಪನೆ

**ಮಾರ್ಕ 1:40-45**

ಯೇಸುಕ್ರಿಸ್ತನ ಸೇವೆ ಮತ್ತು ಕಾರ್ಯವು ತ್ರಿಮುಖವಾದದ್ದು. ಬೋಧನೆ, ಉಪದೇಶ ಹಾಗು ಗುಣಪಡಿಸುವುದು (ಮತ್ತಾಯ 4:23). ಆತನು ಅನೇಕ ರೀತಿಯಲ್ಲಿ ಸ್ವಸ್ಥತೆಯ ಸೇವೆಯನ್ನು ಮಾಡಿದನು. ಅಗತ್ಯತೆಯಲ್ಲಿರುವವರು ಹಾಗು ಮುರಿದ ಮನಸ್ಸಿನವರನ್ನು ಮುಟ್ಟುವುದು ಅವುಗಳಲ್ಲೊಂದು. (ಲೂಕ 7:11-14; 8:44-48; ಮಾರ್ಕ 1:40-45; 7:31-37). ಯಹೂದಿ ಕಾನೂನಿಗನುಸಾರವಾಗಿ ಅಶುದ್ದನೆಂದೆಣಿಸಲ್ಪಡುವ ಸತ್ತವರನ್ನು, ಕುಷ್ಟರೋಗಿಗಳನ್ನು, ಮಾನಸಿಕ ಅಸ್ವಸ್ಥರನ್ನು ಯೇಸುವು ಮುಟ್ಟಿದನು. ಯೇಸುವಿಗೆ ಎರಡು ಆಯ್ಕೆಗಳಿದ್ದವು: ಯಹೂದಿ ಕಾನೂನಿಗೆ ಅಂಟಿಕೊಳ್ಳುವುದು ಅಥವ ಆ ಕಠಿಣ ಕಾನುನಿನಿಂದ ಹೊರಬರುವುದು. ಯೇಸುವು ಉದ್ದೇಶಪೂರ್ವಕವಾಗಿ ಎರಡನೆಯದನ್ನು ಆರಿಸಿಕೊಂಡನು.

ಸತ್ಯವೇದದ ಸಮಯದಲ್ಲಿ ಕುಷ್ಟರೊಗವು ಬೀತಿಗೊಳಿಸುವ ಕಾಯಿಲೆ ಎಂದು ಗುರುತಿಸಲ್ಪಟ್ಟಿತ್ತು. ಅದು ಕ್ರಮೇಣವಾಗಿ ವಿಕಾರಗೊಳಿಸುವ ಕಾಯಿಲೆಯಾಗಿದೆ. ಯಾಜಕಕಾಂಡವು ಕುಷ್ಟರೊಗದ ಕುರಿತಾದ ಪರಿಣಾಮಗಳನ್ನು ವಿವರಿಸುತ್ತದೆ (ಯಾಜಕಕಾಂಡ 13-14 ಮತ್ತು ಅರಣ್ಯಕಾಂಡ 5:3). ಕುಷ್ಟರೊಗಕ್ಕೊಳಗಾದವರು ಇತರರನ್ನು ಸಂಸರ್ಗದಿಂದ ದೂರವಿರುವುದಕ್ಕಾಗಿ ಸಮಾಜದ ಎಲ್ಲಾ ಹಂತಗಳಲ್ಲಿ, ಅಂದರೆ ದೈಹೀಕ, ಮಾನಸಿಕ, ಸಾಮಾಜಿಕ ಹಾಗು ಧಾರ್ಮಿಕ ಕ್ಷೇತ್ರಗಳಲ್ಲಿ ಬಹಿಷ್ಕರಿಸಲ್ಪಟ್ಟಿದ್ದರು ಹಾಗು ಇವರು 'ಅಶುದ್ದನು, ಅಶುದ್ದನು' ಎಂದು ಕೂಗಿಕೊಳ್ಳಬೇಕಾಗಿತ್ತು. ಹಳೇ ಒಡಂಬಡಿಕೆಯಲ್ಲಿ ಎರಡು ಸಾರಿ ಮಾತ್ರ ದೇವರು ಶುದ್ದೀಕರಣ ಮಾಡಿರುವ ನಿದರ್ಶನವಿದೆ (ಅರಣ್ಯಕಾಂಡ 12:10-15, [7ದಿನಗಳ ಬೇರ್ಪಡುವಿಕೆ]; 2ಅರಸು 5:1-14 [7ಸಾರಿ ಮುಳುಗುವುದು]) ನಾಮಾನನು ಕುಷ್ಟರೊಗದಿಂದ ನರಳುತ್ತಿದ್ದಾಗ. ಪ್ರವಾದಿಯಾದ ಎಲೀಷನು ಯೆಹೂದಿ ಧರ್ಮಶಾಸ್ತ್ರಕ್ಕನುಗುಣವಾಗಿ ಯೋರ್ದನ್ ಹೊಳೆಯಲ್ಲಿ 7 ಸಾರಿ ಮುಳುಗಲು ಅಪ್ಪಣೆಕೊಟ್ಟನು. 2ಅರಸು 5:10. ಕುಷ್ಟರೋಗಿಯು ಸ್ಪರ್ಶಕ್ಕೆ ಅರ್ಹನಲ್ಲವೆಂಬದನ್ನು ಇದು ತಿಳಿಸುತ್ತದೆ. ಹೇಗೂ, ಮಾರ್ಕ 1:40-45ರಲ್ಲಿ, ತಮ್ಮ ಜೀವನದಲ್ಲಿ ಹತಾಶೆಗೊಂಡು ಯೇಸುವಿನ ಕುರಿತು ಕೇಳಿಸಿಕೊಂಡ ಕುಷ್ಟರೋಗಿಯು ಸ್ವಸ್ಥನಾಗುವುದಕ್ಕಾಗಿ ಆತನ ಬಳಿಗೆ ಬಂದನು ಹಾಗು ಆತನು ಅವರ ಸಮಾಜದಲ್ಲಿ ಒಬ್ಬನಂತಾದನು. ಕುಷ್ಟರೋಗಿಯ ಮಾತನ್ನು ಕೆಳಿಸಿಕೊಳ್ಳಿರಿ, ನಿನಗೆ ಮನಸ್ಸಿದ್ದರೆ (ನಿನಗೆ ಅಭ್ಯಂತರವಿಲ್ಲದಿದ್ದರೆ) ನನ್ನನ್ನು ಶುದ್ದಮಾಡಬಲ್ಲೆ (ಯೇಸುಕ್ರಿಸ್ತನ ಸಾಮರ್ಥ್ಯಕ್ಕೆ ಸಂಶಯಪಡದೆ) ಈ ಸ್ಥಿತ್ಯಾಂತರದಲ್ಲಿ ಯೇಸುಕ್ರಿಸ್ತನು ನಿಜವಾದ ಸಂಪನ್ಮೂಲವಾಗಿದ್ದನು. ಆತನು ಕರುಣೆಯಿಂದ ತುಂಬಿದ್ದನು. ( ಅಕ್ಷರಶಃ ಅರ್ಥವೇನಂದರೆ - ಆಳವಾದ ಕರುಣೆ) ಹಾಗು ಆತನು ಎಲ್ಲಾ ಅಡೆತಡೆಗಳನ್ನು ಮುರಿದು ಹಾಕಿದನು. ಆತನು ಅಸ್ಪ್ರಶ್ಯರನ್ನು ಮುಟ್ಟಿದನು. (ಧಾರ್ಮಿಕ ಅಶುದ್ದತೆಗೆ ಸಂಬಂಧಿಸಿದಂತೆ ರಬ್ಬಿಗಳ ನಿಯಮಗಳಿಂದ ಬಂಧಿಸಲ್ಪಡುವುದಿಲ್ಲ) ಮತ್ತು ಆತನು ಹೀಗೆ ಹೇಳಿದನು, (ವರ್ತಮಾನ ಕಾಲ - ಅಧಿಕೃತ ಘೋಷಣೆ) ಶುದ್ದನಾಗು (ಅನುಯಾಯಿಯಾಗಿ ನಿಷ್ಕ್ರಿಯ, ನಿರ್ಣಾಯಕ ಕ್ರೀಯೆಯು ಸ್ವೀಕರಿಸಲಾಗಿದೆ) ತಕ್ಷಣ ಆ ಕುಷ್ಟರೋಗಿಯು ಶುದ್ದೀಕರಿಸಲ್ಪಟ್ಟನು ಹಾಗು ಆತನನ್ನು ಬಿಟ್ಟು ಹೋದನು. ಅದು ಸಂಪೂರ್ಣವಾದದ್ದು ಹಾಗು ಎಲ್ಲಾ ಜನರು ನೋಡುವ ರೀತಿಯಲ್ಲಿ ಆಯಿತು. ಹಠಮಾರಿ ರಬ್ಬಿ ಧರ್ಮಾಂದರಾದ ಯಾಜಕರಿಗೆ ತನ್ನ ದೇಹವನ್ನು ತೋರಿಸುವಂತೆ ಆ ಕುಷ್ಟರೋಗಿಗೆ ಯೇಸುಕ್ರಿಸ್ತನು ಹೇಳಿದನು. ಆದರೆ ಆ ಕುಷ್ಟರೋಗಿಯು ಹೊರಟುಹೋಗಿ, ಆಘಟನೆಯ ಕುರಿತು ದಾರಾಳವಾಗಿ ಮಾತಾಡುವವನಾದನು. ( ಅಕ್ಷರಶಃ ಅರ್ಥವೇನಂದರೆ - ಅದರ ಕುರಿತು ಹೆಚ್ಚಾಗಿ ಪ್ರಕಟಿಸಿದನು) ದೈವೀಕ ಸ್ಪರ್ಶವು ಆತನನ್ನು ತಿರಸ್ಕಾರದಿಂದ ಪುನಸ್ಥಾಪನೆಯ ಕಡೆಗೆ ನಡೆಸಿತು.

ನಾವೂ ಸಹ ಛಿದ್ರಗೊಂಡಿರುವ ಲೋಕದಲ್ಲಿ ಜೀವಿಸುತ್ತಿದ್ದೇವೆ. ಜಾತಿ, ಲಿಂಗ, ಭೀತಿಗೊಳಿಸುವ ರೋಗಗಳು ಮುಂತಾದವುಗಳ ಆಧಾರದಿಂದ ವಿಭಜನೆಯ ಗೋಡೆಗಳನ್ನು ಹೊಂದಿರುವ ಲೋಕದಲ್ಲಿದ್ದೇವೆ. ಅವೆಲ್ಲದರ ಮಧ್ಯದಲ್ಲಿ ನಾವು ತಂತ್ರಜ್ಞಾನವೆಂಬ ಏಣಿಯ ತುತ್ತ ತುದಿಯಲ್ಲಿದ್ದೇವೆ. ಆದರೆ ಅನೇಕ ಸಭೆಗಳು ಹಾಗು ಸಂಸ್ಥೆಗಳು 'ಇತರರನ್ನು' ಅಸ್ಪ್ರಶ್ಯರಂತೆ ಕಾಣುತ್ತಿವೆ. ನಾವು ಯೇಸುಕ್ರಿಸ್ತನ ಶಿಷ್ಯರಾಗಿ, ಈ ವಿಭಜನೆಯನ್ನುಂಟುಮಾಡುವ ಗೋಡೆಗಳನ್ನು ಒಡೆದುಹಾಕಬೇಕಾಗಿದೆ. ಹಾಗು ಛಿದ್ರಗೊಂಡಿರುವ ಸಭೆ ಹಾಗು ಸಂಸ್ಥೆಗಳನ್ನು ಪುನಸ್ಥಾಪಿಸಬೇಕಾಗಿದೆ.

**ಪೋಷಣೆಯ ಚಿಂತನೆ**

1. ನೀವು ಸ್ಪರ್ಶಿಸಲು ಅಥವ ನಿಜವಾದ ಮೂಲವಾಗಿರುವ ಯೇಸುಕ್ರಿಸ್ತನಿಂದ ನೀವು ಸ್ಪರ್ಶಿಸಲ್ಪಡಲು ಬಯಸುತ್ತಿರೋ?
2. ಯೇಸುಕ್ರಿಸ್ತನನ್ನು ನಂಬಿಕೆಯಿಂದ ಸ್ಪರ್ಶಿಸಲು ನಿಮಗಿರುವ ಅಡ್ಡಿಯೇನು?
3. ಇವತ್ತು ನೀವು 'ಇತರರ' ಜೀವನವನ್ನು ಸ್ಪರ್ಶಿಸಲು ಉದ್ದೇಶಪೂರ್ವಕವಾದ ಆಯ್ಕೆಯನ್ನು ಹೊಂದಿರುವಿರೋ?

**ಪ್ರಾರ್ಥನೆ:**

ದೇವರೇ, ನನ್ನ ಜೀವನದಲ್ಲಿ ನಿನ್ನ ವಿಶೇಷ ಸ್ಪರ್ಶದ ಅಂದರೆ ನನ್ನ ಜೀವನವನ್ನು ಉಜ್ಜೀವನಗೊಳಿಸುವ ಸ್ಪರ್ಶದ ಅಗತ್ಯತೆ ನನಗಿದೆ. ಹಾಗು ಯಾರ್ಯಾರು ತಿರಸ್ಕೃತರಾಗಿ ಖಿನ್ನರಾಗಿದ್ದಾರೋ ಅಂಥಹ 'ಇತರರ' ಜೀವನವನ್ನು ನಾನು ಸ್ಪರ್ಶಿಸಲು ಬಯಸುತ್ತೇನೆ. ನಿನ್ನ ಕಣ್ಣಿನ ಮೂಲಕ 'ಇತರರನ್ನು' ನಾನು ನೋಡುವಂತೆ ಮಾಡು! ಆಮೆನ್.

## ಸಭೆಗಳು : ದೈವೀಕ ಸ್ವರ್ಶದ ಕಾಲುವೆಗಳು

**ಅಪೋಸ್ತಲರ ಕೃತ್ಯ 3:1-10**

'ನನ್ನನ್ನು ಮುಟ್ಟಿದವರಾರು', ನರಳುತ್ತಿರುವ ಮನುಷ್ಯರ ಕಡೆಗೆ ದೇವರ ಐಕ್ಯಮತ್ಯದ ಪ್ರತಿಕ್ರೀಯೆಯಾಗಿದೆ. ಆದಿಕಾಂಡದ ಮೊದಲ ಮೂರು ಅಧ್ಯಯಗಳು ಸೃಷ್ಟಿಯ ಕುರಿತು ವಿವರಿಸುತ್ತದೆ. ಹಾಗು ದೇವರ ಸ್ವರ್ಶದ ಮೂಲಕ ಮನುಷ್ಯನ ಸೃಷ್ಟಿಯ ಸಂದೇಶವನ್ನು ದೃಡೀಕರಿಸುತ್ತದೆ. ಸತ್ಯವೇದದಲ್ಲಿ ನಾವು ನೋಡುವಂತೆ, ಮನುಕುಲದ ಇತಿಹಾಸದುದ್ದಕ್ಕೂ ಮನುಷ್ಯರೊಂದಿಗಿನ ಹಾಗು ಇಸ್ರಾಯೇಲ್ಯರೊಂದಿಗಿನ ಸಂಬಂಧವನ್ನು ದೇವರು ಬಯಸುತ್ತಲೇ ಇದ್ದಾನೆ.

ದೇವರು ಮತ್ತು ಮನುಷ್ಯರೊಂದಿಗಿನ ಸಂಬಂಧದ ಪ್ರಬಲ ಆಯಾಮದ ಕುರಿತಾದ ವಿಷಯಗಳನ್ನು ಸುವಾರ್ತೆಗಳಲ್ಲಿ ಕಾಣುವ ಅದ್ಭುತಗಳು ಹಾಗು ಸ್ವಸ್ಥತೆಗಳು ವಿವರಿಸುತ್ತದೆ. ದೇವಜನರು ಯಾವಾಗೆಲ್ಲಾ ಕಠಿಣ ಪರಿಸ್ಥಿತಿಗಳನ್ನು ದಾಟುತ್ತಾರೂ, ಆಗ ದೇವರು ನಿರಂತರವಾಗಿ ತನ್ನ ಪ್ರಸನ್ನತೆಯು ಅವರೊಂದಿಗಿರುವುದನ್ನು ದೃಡೀಕರಿಸುತ್ತಾ ಬಂದಿದ್ದಾನೆ. ನರಳಾಟದಲ್ಲಿದ್ದ ಆ ಸ್ತ್ರೀಯು ಸ್ವಸ್ಥತೆಯನ್ನು ಅನುಭವಿಸಿದಾಗ, ಆ ಸ್ತ್ರೀಯು ಮುಟ್ಟಿದಾಗ 'ನನ್ನನ್ನು ಮುಟ್ಟಿದವರಾರು'ಎಂದು ಯೇಸುಕ್ರಿಸ್ತನು ಕೇಳಿದ ಆ ಪ್ರಶ್ನೆಯು, ನರಳುತ್ತಿರುವ ಮನುಷ್ಯರಿಗೆ ಸೇವೆಸಲ್ಲಿಸಲು ದೇವರು ದೂರದೃಷ್ಟಿಯನ್ನು ಹೊಂದಿದ್ದನು ಎಂಬದನ್ನು ನಾವು ತಿಳಿದುಕೊಳ್ಳಬಹುದು. 'ಯಾರನ್ನು ನಾನು ಮುಟ್ಟಿದೆ' ಎಂದು ಕೇಳದೆ 'ನನ್ನನ್ನು ಮುಟ್ಟಿದವರಾರು' ಎಂದು ಯೇಸುವು ಕೇಳಿದನು.

ಸ್ವಸ್ಥತೆಯ ಕಥೆಯನ್ನು ನಾವು ಅಪೋಸ್ತಲರ ಕೃತ್ಯಗಳು 3:1-10ರಲ್ಲಿಯೂ ನೋಡುತ್ತೇವೆ. ಸಭೆಯಲ್ಲಿ ನಡೆದ ದೊಡ್ಡ ಸ್ವಸ್ಥತೆಯ ಸೇವೆಯು ಅಲ್ಲಿ ಸ್ಪಷ್ಟೀಕರಣಗೊಂಡಿದೆ. ಆ ಕಥೆಯಲ್ಲಿ ಪೇತ್ರನು ಹಾಗು ನರಳುತ್ತಿರುವ ಮನುಷ್ಯನ ಮಧ್ಯದಲ್ಲಿ ನಡೆದ ಘಟನೆಯ ಚಿತ್ರೀಕರಣವಿದೆ. "ಅವನನ್ನು ಬಲಗೈ ಹಿಡಿದು ಎತ್ತಿದನು."

ಅಲ್ಲಿ ಪೇತ್ರನು ಮಾಡಿದ ಕಾರ್ಯದಿಂದ ನಾವು **ಮೂರು** ಸತ್ಯವೇದದ ಸತ್ಯಗಳನ್ನು ತಿಳಿದುಕೊಳ್ಳಬಹುದು.

**1. ಒಬ್ಬ ಮನುಷ್ಯನ ಸಹಜ ಸ್ಥಿತಿ : ಯಾರ ಗಮನಕ್ಕೂ ಬಾರದೆ ಸುಂದರ ದ್ವಾರದ ಮುಂದೆ ಕುಳಿತಿರುವ ಅಗತ್ಯತೆಯಲ್ಲಿರುವ ವ್ಯಕ್ತಿ.**
ಆ ಮನುಷ್ಯನು ದೇವರ ಸಾನಿಧ್ಯದಲ್ಲಿ ಇದ್ದರೂ ಸಹ ಇತರರ ಮೇಲೆ ಆತುಕೊಂಡವನಾಗಿದ್ದನು.ಆದರೆ ಆತನು ದೇವರ ಪ್ರಸನ್ನತೆಯನ್ನು ಸಂಪೂರ್ಣವಾಗಿ ಅನುಭವಿಸಿರಲಿಲ್ಲ. ಆತನು ಅನೇಕ ವಿಷಯಗಳಲ್ಲಿ ತನ್ನನ್ನು ಸೀಮಿತಮಾಡಿಕೊಂಡು ಸಾಮಾನ್ಯ ಜೀವನವನ್ನು ಜೀವಿಸಲು ಅಸಮರ್ಥನಾಗಿದ್ದನು. ಅಗತ್ಯತೆಯಲ್ಲಿರುವ ಮನುಷ್ಯನು ಸುಂದರ ದ್ವಾರದ ಮುಂದೆ ಕುಳಿತಿರುವುದು ಶೋಚನೀಯ ವಿಷಯವಾಗಿತ್ತು ಮತ್ತು ಆತನು ಯಾರ ಗಮನಕ್ಕೂ ಬರಲಿಲ್ಲ. ಅವನು ಮನುಷ್ಯ ಸ್ವರ್ಶದ ಸಹಾಯಕ್ಕಾಗಿ ಹಾತೊರೆಯುತ್ತಿದ್ದನು.

**2. ದೇವರ ಸ್ವಸ್ಥತೆಯ ಕಾಲುವೆ : ದೇವರು ಸ್ವಸ್ಥಗೊಳಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆಂದು ಪೇತ್ರನು ಆತನಲ್ಲಿ ಬರವಸವಿಟ್ಟಿದ್ದನು.**
ನರಳುತ್ತಿರುವ ಈ ಮನುಷ್ಯನಿಗೆ ಸ್ವಸ್ಥತೆಯು ದೊರಕಲು ಪೇತ್ರನ ಸಮರ್ಪಣೆಯಲ್ಲಿ ಯಾವುದು ಕಾರ್ಯಮಾಡಿತು. ಇತರರೂ ಸಹ ಆತನನ್ನು 'ನೋಡಿರಬಹುದು' ಆದರೆ, ದೇವರಲ್ಲಿ ಸ್ವಸ್ಥಮಾಡುವ ಸಾಮರ್ಥ್ಯವಿದೆಯೆಂದು ಪೇತ್ರನಿಗೆ ಭರವಸವಿತ್ತು ಹಾಗು ಈ ಭರವಸೆಯು ನರಳಾಡುತ್ತಿದ್ದ ಆ ಮನುಷ್ಯನ ಜೀವನದಲ್ಲಿ ವ್ಯತ್ಯಾಸವನ್ನು ಉಂಟುಮಾಡಿತು. ಸ್ವಸ್ಥತೆಯ ಮೂಲಸಂಪತ್ತು ದೇವರಿಂದ ಹರಿದುಬರುವಂತದ್ದಾಗಿದೆ ಎಂಬದೇ, ನಾವು ಸ್ವಸ್ಥತೆಯ ಸೇವೆಯನ್ನು ಮಾಡುವಾಗ ಕಲಿಯಬೇಕಾಗಿರುವ ಮೂಲ ಪಾಠವಾಗಿದೆ. ನಾವು ನಮ್ಮ ಅಪನಂಬಿಕೆಯಿಂದ ಸರ್ವಶಕ್ತನಾದ ದೇವರ ಶಕ್ತಿಯನ್ನು ಮಿತಿಗೊಳಿಸುವ ಸಾಧ್ಯತೆಯಿದೆ. ಇತರ ಸ್ವಸ್ಥತೆಯ ಸಂಪನ್ಮೂಲಗಳಾಗಿರುವ ವೈದ್ಯಕೀಯ ವಿಜ್ಞಾನ ಮತ್ತು ತಂತ್ರಜ್ಞಾನದ ಕುರಿತಾಗಿ ನಮಗಿರುವ ಅವಲಂಬಿಕೆಯ ಯೋಚನೆಯು, ಸ್ವಸ್ಥತೆಯ ಸೇವೆಯ ಕುರಿತಾಗಿ ನಮಗಿರುವ ತಿಳುವಳಿಕೆಯನ್ನು ಮಿತಿಗೊಳಿಸುವ ಸಾಧ್ಯತೆಯಿದೆ. ಅನೇಕ ಸಂದರ್ಭಗಳಲ್ಲಿ ಮಿಷನ್ ಆಸ್ಪತ್ರೆಗಳು ಸಭೆಯನ್ನು ನಿರ್ಲಕ್ಷಿಸುವ ಮೂಲಕ ಸ್ವಸ್ಥತೆಯ ಸೇವೆಯನ್ನು ಮರೆತುಹೋಗುತ್ತಿವೆ. ನಿಜವಾಗಿಯೂ ಯೇಸುಕ್ರಿಸ್ತನ ಗುಣಪಡಿಸುವ ಶಕ್ತಿಯು ಜನರ ಜೀವನದಲ್ಲಿ ದೇವರ ಸ್ವರ್ಶವನ್ನುಂಟುಮಾಡುವ ಕಾಲುವೆಯಾಗಿರಬೇಕು, ಎಂದು ಸ್ವಸ್ಥತೆಯ ಸೇವೆಯ ಯಜಮಾನನು ಸಭೆಗೆ ಹೇಳುತ್ತಾನೆ.

**3. ಗುಣಹೊಂದಿದವರ ನೂತನ ಸ್ಥಿತಿ : ಸಭೆಯ ಸದಸ್ಯರಾಗಿ**
ನರಳುತ್ತಿರುವ ಈ ಮನುಷ್ಯನ ಸ್ಥಿತಿಯು ಅವನು ಗುಣಮುಖನಾದ ಮೇಲೆ ಮಾರ್ಪಾಟಾಯಿತು. ಆತನು ಸುಂದರದ್ವಾರದ ಹೊಗಿನಿಂದ ದೇವಾಲಯದ ಒಳಗೆ ಪ್ರವೇಶಿಸುತ್ತಾನೆ. ಆತನು ದೈಹೀಕ, ಸಾಮಾಜಿಕ, ಆರ್ಥಿಕ, ಸಭಾ ಸ್ಥಿತಿ ಹಾಗು ಆತನು ನಂಬಿಕೆಯ ಮತ್ತು ಆರಾಧಿಸುವ ಸಮಾಜದ ಭಾಗವಾದನು. ದೇವರೊಂದಿಗೆ ಒಂದು ನೂತನ ಸಂಬಂಧವು ಅಭಿವೃದ್ಧಿಯಾಯಿತು. ಸಭೆಯ ಒಬ್ಬ ಸದಸ್ಯನ ಸಮರ್ಪಣೆಯಿಂದ ಹಾಗು ಸ್ವಸ್ಥವಾದ ವ್ಯಕ್ತಿಯನ್ನು ತಮ್ಮೊಂದಿಗೆ ಆರಾಧಿಸುವುದಕ್ಕಾಗಿ ಸ್ವಿಕರಿಸಿದ್ದರಿಂದ ಇದು ನಿಜವಾಗಲು ಸಾಧ್ಯವಾಯಿತು. ಈ ರೀತಿಯಾಗಿ ಸಭೆಯ ಬೆಳವಣಿಗೆಗೆ ಸ್ವಸ್ಥತೆಯ ಸೇವೆಯು ಸಹಾಯ ಮಾಡುತ್ತದೆ. ಇಂದಿನ ದಿನದಲ್ಲಿ ನರಳುತ್ತಿರುವ ವ್ಯಕ್ತಿಯ ಮೌನವಾದ ಪ್ರಶ್ನೆ ಯಾವುದೆಂದರೆ, "ನಾವು ಅಸ್ಪ್ರಶ್ಯರೋ?" "ನಮ್ಮನ್ನು ಯಾರಾದರೂ ಸ್ವರ್ಶಿಸುವರೋ?" "ನನ್ನನ್ನು ಮುಟ್ಟಲು ಯಾರಾದರೂ ಸಿದ್ದರಿರುವರೋ?" ಮಾನವ ಸ್ವರ್ಶವು ಗುಣಪಡಿಸುತ್ತದೆ, ಅದರ ಮೂಲವು ಮಾನವೀಯತೆಯ ದೈವೀಕ ಸ್ವರ್ಶದಿಂದ ಉಂಟಾಗುತ್ತದೆ. ದೈವೀಕ ಸ್ವರ್ಶದ ಕಾಲುವೆಯಾಗಲು ನೀವು ಬಯಸುವಿರೋ?

**ಪೋಷಣೆಯ ಚಿಂತನೆ**

1. ದೇವರಿಗೆ ನಾವು ಯಾವ ರೀತಿಯ ಕಾಲುವೆಯಾಗಿದ್ದೇವೆ ಎಂಬದನ್ನು ಪ್ರಾರ್ಥನಾಪೂರ್ವಕವಾಗಿ ಆತ್ಮಾವಲೋಕನ ಮಾಡಿಕೊಳ್ಳೋಣವೇ?
2. ಯೇಸುಕ್ರಿಸ್ತನು ಮುಟ್ಟಿದ ಹಾಗೆ ನಾವು ಜನರನ್ನು ಸ್ವರ್ಶಿಸಿ ಮಾನವೀಯತೆಯ ಸೇವೆಯನ್ನು ಮಾಡುತ್ತಾ ದೇವರ ಕಾಲುವೆಯಾಗೋಣವೇ?

**ಪ್ರಾರ್ಥನೆ :** "ಕರ್ತನೇ, ದೈವೀಕ ವೈದ್ಯನೇ, ನಿನ್ನ ಪ್ರಸನ್ನತೆ, ಪ್ರೀತಿ ಮತ್ತು ನಿನ್ನ ಸ್ವಸ್ಥತೆಯ ಶಕ್ತಿಯ ಮೂಲಕ ನಮ್ಮನ್ನು ನಿನ್ನ ಸ್ವರ್ಶದ ಕಾಲುವೆಯಾಗುವಂತೆ ಮಾಡು."

**ಇಸ್ರಾಯೇಲ್ ಡೇವಿಡ್ ಎ**
ಯೂನಿಯನ್ ಬಿಬ್ಲಿಕಲ್ ಸೆಮಿನರಿ, ಪೂನೆ.